

ಸತಾಯಿಸುವುದೇ ಅವುಗಳ ವಿಶೇಷತೆ. ಈ ಕೆಟಗರಿಗೆ ಕನ್ನಡಕ, ಮೊಬೈಲ್ ಹಾಗೂ ರಿಮೋಟ್‌ಗಳೂ ಸೇರಿಕೊಂಡಿವೆ.

ಕನ್ನಡಿಗಳು ಹೆಣ್ಣುಮಕ್ಕಳ ಹಣೆಗಿಂತ ಹೆಚ್ಚು ವಿವಿಧ ವಿನ್ಯಾಸದ ಬಿಂದಿಗಳನ್ನು ದೀರ್ಘಕಾಲ, ಅಂದರೆ ಅವುಗಳ ಹಿಂಬದಿಯ ಅಂಟು ಕನ್ನಡಿಗೆ ಅಂಟುವ ತನಕ ಅಂಟಿಸಿಕೊಂಡಿರುತ್ತವೆ. ವಾಷಿಂಗ್ ಮೆಷಿನ್ ಟಾಪ್ ಅಂತೂ, ಟಬ್ಬು, ಬಕೆಟ್ಟು, ಪೇಪರ್, ನೆಲ ಒರೆಸುವ ಬಟ್ಟೆ, ಕಸ ತುಂಬುವ ಮೊರ ಎಲ್ಲವನ್ನೂ ಇಡುವ ಕಟ್ಟೆಯಂತಾಗಿರುತ್ತದೆ. ಆಗಾಗ ಪೊರಕೆಯೂ ಡಯಾಗ್ನಲ್ ಆಗಿ ಅದರ ಮೇಲೆ ಸ್ಥಾಪನೆಯಾಗುವುದುಂಟು.

ಫ್ರಿಜ್, ಓವನ್ ಕತೆ ಕೇಳಲೇಬೇಡಿ. ಯಾರ ಮನೆಯಲ್ಲಾದರೂ ಅವುಗಳ ಟಾಪ್ ಎಲ್ಲಿಯಾದರೂ ಖಾಲಿಯಾಗಿರುವುದನ್ನು ಕಂಡರೆ ಅವರನ್ನು ನೊಬೆಲ್ ಬಹುಮಾನಕ್ಕೆ ಶಿಫಾರಸ್ಸು ಮಾಡಬಹುದು. ಅದರ ಒಳಗೆ ಎಷ್ಟು ಒತ್ತುವರಿಯಾಗಿರುತ್ತದೆಯೋ, ಟಾಪ್ ಕೂಡ ಅಷ್ಟೇ ಒತ್ತುವರಿಯಾಗಿರುತ್ತದೆ. ಒಳಗಿರುವ ಸಾಮಾನುಗಳನ್ನು ತೆರೆಯಲು ಹೋದರೆ, ಮೇಲೆ ಕುಳಿತಿರುವ ವಸ್ತುಗಳು ಸಣ್ಣಗೆ ಶೇಕ್ ಡಾನ್ಸ್ ಮಾಡಲು ಶುರುಮಾಡುತ್ತವೆ.



ಇತ್ತೀಚೆಗೆ ಯಾರದ್ದೋ ಮನೆಗೆ ಪೂಜೆಗೆ ಹೋದ ಸಂದರ್ಭದಲ್ಲಿ, ದೇವರಿಗೆ ಬೆಳಗುವ ಬೆಳ್ಳಿಯ ಕಳಸ, ಪುಟ್ಟ ದೀಪಗಳು, ಅರ್ಧ ಓಪನ್ ಮಾಡಿದ ಬಿಸ್ಕತ್ತಿನ ಪ್ಯಾಕುಗಳು, ಹಾಲಿನ ಪುಟ್ಟ ಲೋಟ, ಅರ್ಧಂಬರ್ಧ ತಿಂದ ಸ್ವೀಟ್ ಬಾಕ್ಸುಗಳು ಎಲ್ಲವೂ ಓವನ್ ಒಳಗೆ ಬೆಚ್ಚಗೆ ಕುಳಿತಿದ್ದವು. ಹುಬ್ಬೇರಿಸಿ ಕೇಳಿದ್ದಕ್ಕೆ, 'ಅದರೊಳಗೆ ಇರುವೆ ಗಿರುವೆ, ಜಿರಳೆ ಹೋಗುವುದಿಲ್ಲ, ಜೊತೆಗೆ ಏರ್‌ಟೈಟ್ ಆಗಿಯೂ ಕೆಲಸ ಮಾಡುತ್ತದೆ. ಇನ್ನು ಮಂಗಳವಾರ, ಶುಕ್ರವಾರ ಪೂಜೆಗೆ ಬೆಳ್ಳಿ ಕಳಶ ಪದೇ ಪದೇ ಬೇಕಾಗುತ್ತಾದ್ದರಿಂದ, ಇದರೊಳಗೇ ಸೇಫ್ ಆಗಿ ಇಟ್ಟದ್ದೇನೆ' ಎಂದಾಗ ಕಕ್ಕಾಬಿಕ್ಕಿ.

ಮತ್ತೊಬ್ಬರ ಮನೆಯಲ್ಲಿ ಗ್ರೈಂಡರ್ ತುಂಬ ವೇಸ್ಟ್ ಕವರ್, ಉಪಯೋಗಿಸಿ ಬಿಸಾಡುವ ಲೋಟ, ತಟ್ಟೆಗಳು ತುಂಬಿದ್ದವು. ಕೆಲವು ಬಾಗಿಲಿನ ಚಿಲಕಗಳು ಏನಾದರೊಂದು ವಸ್ತುವನ್ನು ನೇತುಹಾಕಿಕೊಂಡೇ ಇರುತ್ತವೆ. ಏನಿರದಿದ್ದರೂ ಕೆಲವೊಮ್ಮೆ ರಬ್ಬರ್‌ಬ್ಯಾಂಡ್‌ನಿಂದ ಬಂಧಿಸಲ್ಪಟ್ಟಿರುವುದಿದೆ. ಒಲೆಯ ಮೇಲೆ ಇಟ್ಟಿರುವ ಕುಕ್ಕರು, ಹೆಂಚನ್ನೂ ಖಾಲಿ ಬಿಡುವುದಿಲ್ಲ. ಅದರ ಮೇಲೆ ಹಸಿಕೊಬ್ಬರಿ, ತುಪ್ಪದ ಗಿಂಡಿ, ಹಾಲಿನ ಪಾತ್ರೆ, ಹೀಗೆ ಏನಾದರೊಂದು ವಾಲಿಕೊಂಡು ಓರೆನೋಟ ಬೀರುತ್ತಿರುತ್ತವೆ.

ಎತ್ತರದ ಬೀರುಗಳು ನಿಲುಕಲಾರದ ಕಾರಣ, ಅದರ ಚಾವಿಯನ್ನಷ್ಟೇ ಅದರ ಮೇಲಿಡುವುದು ಸಹಜ. ಅದೇ ಸಣ್ಣ ಅಥವಾ ಅಡ್ಡಡ್ಡ ಇರುವ ಬೀರುಗಳಾದರೆ, ಅದರ ಮೇಲೆ ಬಾಕ್ಸುಗಳು, ಚೀಲಗಳು, ಜೊತೆಗೆ ಪೇಪರ್‌ಗೇಪರ್ ಹಾಸಿ, ಹಸಿಕೊಬ್ಬರಿಯನ್ನೋ, ಬಿಡಿಸಿದ ಸೊಪ್ಪನ್ನೋ ಗಾಳಿಗೆ ಒಣಹಾಕುತ್ತ ವಿವಿಧೋದ್ದೇಶಗಳಿಗೆ ಬಳಸುವುದನ್ನು ನಮ್ಮ ಜನರನ್ನು ನೋಡಿಯೇ ಕಲಿಯಬೇಕು. ಹಿಂದಿನ ಕಾಲದಲ್ಲಿದ್ದ ಬಾಕ್ಸ್ ಟೀವಿಗಳ ಟಾಪ್ ಕೂಡ ಇದೇ ರೀತಿ ಹೂಕುಂಡ, ಅಲಂಕಾರಿಕ ವಸ್ತುಗಳು, ಅಲಾರಂ ಗಡಿಯಾರ, ಅದೂ ಇದೂ ಎಂದು ತುಂಬಿ ತುಳುಕುತ್ತಿದ್ದವು. ಇತ್ತೀಚೆಗೆ ಅದು ಸ್ಮಾರ್ಟ್ ಆಗಿ, ಗೋಡೆಗೆ ಅಂಟಿಕೊಂಡ ವಾಲ್‌ಪೇಪರ್‌ನಂತಾಗಿದೆ. ಹಾಗಾಗಿ ಟಾಪ್ ಮೇಲೆ ವಸ್ತುಗಳನ್ನು ಹೊರಿಸುವುದಿರಲಿ, ಒರೆಸಲೂ ಸ್ಥಳವಿಲ್ಲದೆ, ತನ್ನ ಝೀರೊ ಫಿಗರ್ ಮೇಂಟೇನ್ ಮಾಡಿಕೊಂಡು ಬಚಾವ್ ಆಗಿದೆ ಎನ್ನಬಹುದು.

ರೇಡಿಯೊ, ಟೇಪ್‌ರೆಕಾರ್ಡರ್‌ಗಳನ್ನು ಕೂಡ ಇದೇ ಪಟ್ಟಿಗೆ ಸೇರಿಸಬಹುದು. ಆದರೆ ಇವುಗಳು ರೂಪವಿಲ್ಲದೆ ಮೊಬೈಲ್ ಒಳಗೆ ಬಂಧಿಯಾಗಿ ಲಿವ್ ಇನ್ ರಿಲೇಶನ್‌ನಲ್ಲಿ ಬದುಕುತ್ತಿವೆ. ಟೀವಿ ಹಾಗೂ ಮೊಬೈಲ್ ಒಂದರೊಳಗೊಂದು ಬಂಧಿಯಾಗಿರುವುದರಿಂದ ದಂಪತಿಗಳ ಸಾಲಿಗೆ ಸೇರಿಸಬಹುದು. ದಿಂಬುಗಳ ಕೆಳಗೆ, ಹಾಸಿಗೆ ಮೇಲೆ ಸಾಕಷ್ಟು ವಸ್ತುಗಳು ಪವಡಿಸಿರುತ್ತವೆ.

ಇನ್ನು ಒಣಗಿದ ಬಟ್ಟೆಗಳನ್ನು ಹೊರಗಿನಿಂದ ತಂದಾಗ, ಅವುಗಳನ್ನು ಗುಡ್ಡೆ ಹಾಕಲು ಕುರ್ಚಿ, ಡೈನಿಂಗ್ ಟೇಬಲ್, ಟೀಪಾಯಿ, ಸೋಫಾ, ಮಂಚ, ಹೀಗೆ ಯಾವುದು ಅಂದಿಗೆ ಸೂಕ್ತ ಎನಿಸುತ್ತದೆಯೋ ಅದರ ಮೇಲೆ ರಾಶಿ ಹಾಕುವುದೇ ಹೆಚ್ಚು. ಕೆಲವೊಮ್ಮೆ ಬಟ್ಟೆಗಳ ರಾಶಿ, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ವರ್ಗಾವಣೆಯಾಗುತ್ತಿರುತ್ತದೆಯೇ ಹೊರತು ಅಲ್ಮೆರಾ ಸೇರುವುದಿಲ್ಲ. ಹಾಗೆ ಎರಡ್ಮೂರು ದಿನ ಮಡಚಿಕೊಂಡು ಸ್ವಸ್ಥಾನ ಸೇರದೇ ಹೋದಲ್ಲಿ, ಸ್ನಾನಕ್ಕೆ ಹೋಗುವವರು ಅವುಗಳನ್ನು ಹಿರಣ್ಯಕಶಿಪುವಿನ ಹೊಟ್ಟೆ ಬಗೆದಂತೆ ಬಗೆದು, ತಮ್ಮ ಬಟ್ಟೆಗಳನ್ನು ಹುಡುಕಿಕೊಂಡು ಹೋಗುವುದರಿಂದ, ಮಡಚಿಡುವ ಮೊದಲೇ ಮತ್ತೆ ಒಗೆಯಲು ಹೋಗುವ ಸಂದರ್ಭ ಬಂದಿರುತ್ತದೆ. ಸ್ನಾನದ ನಂತರ ಟವೆಲ್ ಎನ್ನುವುದು ನೀಟಾಗಿ ಹಗ್ಗದ ಮೇಲೆ ಹರಡಿಕೊಂಡಿರುವುದಕ್ಕಿಂತ, ಹಾಸಿಗೆ, ಕುರ್ಚಿ ಹೀಗೆ ಸಿಕ್ಕಸಿಕ್ಕಲ್ಲಿ ಮುದುಡಿಯಾಗಿ ನರಳುತ್ತಾ ಬಿದ್ದಿರುವುದೇ ಹೆಚ್ಚು.

ಡೈನಿಂಗ್ ಟೇಬಲ್ ಮೇಲೆ ಊಟ ಮಾಡುವುದಂತೂ ತುಂಬ ಅಪರೂಪ. ಅದು ಕೇವಲ ಕುಟುಂಬದವರು ಮನೆಯೊಳಗೆ ಕಾಲಿಡುತ್ತಿದ್ದಂತೆ, ತಾವು ಹೊತ್ತು ತಂದಿರುವ ಸಾಮಾನುಗಳನ್ನೆಲ್ಲ ಹೇರುವ ಸ್ಟೋರ್ ರೂಮ್‌ನಂತಾಗಿರುತ್ತದೆ ಅಷ್ಟೇ. ಅದೆಷ್ಟೇ ಆಧುನಿಕವಾಗಿ ಆ ಕಿಚನ್, ಈ ಕಿಚನ್ ಅಂತ ಕಟ್ಟಿಸಿ ಸಾಮಾನುಗಳನ್ನು ಅಡಗಿಸಿಟ್ಟರೂ, ಅಡುಗೆಮನೆಯ ಕಟ್ಟೆ ಮಾತ್ರ ಜಾತ್ರೆಯಲ್ಲಿನ ಜನಜಂಗುಳಿಯಂತೆ ಬಹುತೇಕ ಗಿಜಿಗುಟ್ಟುತ್ತಿರುತ್ತದೆ.

ಬಹುಶಃ ಈ ರೀತಿ ಎಲ್ಲೆಡೆ ವಸ್ತುಗಳನ್ನು ತುಂಬುವ ಕುಟುಂಬಗಳನ್ನು ನೋಡಿಯೇ 'ತುಂಬುಕುಟುಂಬ' ಹೆಸರಿನ ಪರಿಕಲ್ಪನೆ ಬಂದಿರಬಹುದು ಅಲ್ಲವೇ?

ಪ್ರತಿಕ್ರಿಯಿಸಿ: **feedback@sudha.co.in**